O.S.No.183/2018
DW.2

**ಸಾಕ್ಷಿಯನ್ನು ದಿಃ *30/08/2024* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ೦ಃ ಪ್ರತಿವಾದಿಯ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| ನಿ.ಡಿ.3 | ಎಲಐಸಿಯವರು ದಿಃ03-01-2024 ರಂದು ನೀಡಿರುವ ಲೆಕ್ಕ ಪತ್ರದ ಜ್ಞಾಪನ ಪತ್ರ |

***ಪಾಟೀ ಸವಾಲು ೦ಃ ವಾದಿ ಪರ ವಕೀಲರಿಂದ.***

ಈ ದಾವೆ ಕುರಿತು ನನಗೆ ಮಾಹಿತಿ ಇದೆ. ನಮ್ಮ ಪಾಲಿಸಿಯ ಪ್ರಕಾರ ನಮ್ಮ ಹತ್ತಿರ ನಾಮಿನಿ / ಪ್ರತಿವಾದಿ ನಂ.1 ಬಂದು ಬೇಡಿಕೆ ಇಟ್ಟಿದ್ದು, ಯಾವುದೇ ರೀತಿಯ ತಕರಾರು ಇರಲಾರದ ಕಾರಣ ಪಾಲಿಸಿಯ ಪ್ರಕಾರ ಅವರಿಗೆ ನಾವು ವಿಮೆ ಹಣವನ್ನು ನೀಡಿರುತ್ತೇವೆ. ಈ ದಾವೆಯ ವ್ಯಾಜ್ಯಾಂಶ ನೋಡಿದ ನಂತರ ನಮಗೆ ತಕರಾರು ಇದೆ ಎಂದು ಗೊತ್ತಾಯಿತು. ಆದ್ದರಿಂದ ಸದರಿ ಒಂದು ವಿಮೆ ಹಣವನ್ನು ನಾಮಿನಿಗೆ ಕೊಡಬಾರದು ಎಂದರೆ ಸರಿ. ಸಾಕ್ಷಿದಾರರು ಒಂದು ಪಾಲಿಸಿಯಲ್ಲಿ ಕೊಡುವುದು ಬಾಕಿ ಇದೆ ಎಂದು ಉತ್ತರಿಸಿರುತ್ತಾರೆ.

***ಮರು ವಿಚಾರಣೆ ೦ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಅದೆ,**

**1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,**
**ಧಾರವಾಡ.**